

ಒತ್ತಡಗಳನ್ನು ತರಿಸುತ್ತವೆ. ಹಾಗೆಯೇ ಕಣ್ಣಿಗೆ ಕಾಣುವ ಹಲವಾರು ವೈಪರೀತ್ಯಗಳು ಹರೆಯದ ಮನಸ್ಸಿನ ಮೇಲೆ ತಮ್ಮ ಕರಿ ಛಾಯೆಯನ್ನು ಮೂಡಿಸುತ್ತವೆ.

ಹರೆಯದಲ್ಲಿ ಹೆಣ್ಣುಮಕ್ಕಳಿಗೆ ತಮ್ಮ ಮುಖಲಕ್ಷಣ, ವೇಷ ಭೂಷಣಗಳ ಬಗ್ಗೆ ವಿಶೇಷ ಅಭಿರುಚಿಗಳಿರುತ್ತವೆ. ಉಡುಪುಗಳ ಬಣ್ಣ, ಬೆಡಗುಗಳಿಗೆ ಮಾರು ಹೋಗುವ ವಯಸ್ಸು ಅದು. ತಾವು ಧರಿಸುವ ಬಟ್ಟೆಗಳು ಮತ್ತು ಅಲಂಕಾರ ದ್ರವ್ಯಗಳು ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸುತ್ತವೆ ಎಂಬ ಭಾವನೆ ಈ ವಯಸ್ಸಿನಲ್ಲಿ ಅವರೊಳಗೆ ತೀವ್ರವಾಗಿರುತ್ತದೆ. ಉಡಿಗೆ ತೊಡಿಗೆ ಮತ್ತು ಸೌಂದರ್ಯ ಸಾಧನಗಳಿಗಾಗಿ ಅವರು ತಮ್ಮ ಇತರ ಕೆಲವು ಅವಶ್ಯಕತೆಗಳನ್ನು ತ್ಯಾಗ ಮಾಡಲೂ ಸಿದ್ಧರಾಗಿರುತ್ತಾರೆ. ಹರೆಯದ ಹೆಣ್ಣಿನ ಶೋಷಣೆಗೆ ಪ್ರಕೃತಿದತ್ತವಾದ ಸ್ತ್ರೀತ್ವವೂ ಒಂದು ಕಾರಣವಾದರೆ, ಗಂಡಿನ ಸ್ವಾರ್ಥವೂ ಸೇರಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಅಮ್ಮ– ಮಗಳ ಸಂಬಂಧದ ಆಪ್ತತೆ, ದೈನಿಕದಲ್ಲಿ ಬರುವ ಒಂದು ಮಾತು, ಒಂದು ಸಂಜ್ಞೆಯಲ್ಲಿ ಆಕಾರ ಪಡೆಯುತ್ತಿರುತ್ತದೆ.

ಮಗಳ ಮೆದುಳು ಕ್ರಿಯಾಶೀಲವಾಗಿದ್ದರೆ, ಅವಳು ಯಾವತ್ತೂ ಸಂತೋಷದಲ್ಲೇ ಇರುತ್ತಾಳೆ. ಅವಳ ಯಶಸ್ಸಿನ ಗುಟ್ಟು ಸಹ ಇದೇ. ಇಂದಿನ ಶಿಕ್ಷಣ ಪದ್ಧತಿಯಲ್ಲೇ ಅನೇಕ ಸಮಸ್ಯೆಗಳಿವೆ. 'ಮೆದುಳು ಒಂದು ಹೊಟ್ಟೆಯಿದ್ದಂತೆ ಅಂತ ಭಾವಿಸಿದರೆ, ಅದರೊಳಗೆ ಎಷ್ಟು ತುಂಬುತ್ತೇವೆ ಎಂಬುದು ಮುಖ್ಯವಲ್ಲ, ಅದು ಎಷ್ಟನ್ನು ಜೀರ್ಣಿಸಿಕೊಳ್ಳುತ್ತದೆ ಎಂಬುದು ಮುಖ್ಯ' ಎನ್ನುತ್ತಿದ್ದರು ವಿದ್ವಾಂಸ ಗೌರೀಶ ಕಾಯ್ಕಿಣಿಯವರು.

ಕಾಯಿಗಳು ತುಂಬಿದ್ದ ಮರಗಳಿಗೆ ಕಲ್ಲು ಬೀಳುವಂತೆ, ಹರೆಯದ ತರುಣಿಯರತ್ತ ನೆಟ್ಟ ಎಲ್ಲರ ನೋಟವೂ ಕತ್ತಿಯ ಅಲಗಿನಷ್ಟು ಸೂಕ್ಷ್ಮವಾಗಿರುತ್ತದೆ. ಒಟ್ಟಾರೆಯಾಗಿ ವ್ಯಕ್ತಿತ್ವ ವಿಕಸನದ ಮೊದಲ ಹೆಜ್ಜೆ ಆರಂಭವಾಗುವುದು, ತನ್ನ ಕೆಲಸವನ್ನು ತಾನು ಮಾಡಿಕೊಳ್ಳುವಲ್ಲಿಂದ. ಹೆಣ್ಣುಮಕ್ಕಳಲ್ಲಿ ಮೊದಲು ಸ್ವಾವಲಂಬನೆಯನ್ನು ರೂಢಿಸಬೇಕು. ಈ ಮಧ್ಯೆಯೂ ನಮಗಿರುವಷ್ಟೇ ಘನತೆ ನಮ್ಮ ಅವಲಂಬಿತರಲ್ಲೂ ಇರುತ್ತದೆ ಎಂಬುದನ್ನು ಪೋಷಕರು ಮರೆಯಬಾರದು.

## ಮಧ್ಯಮ ವರ್ಗದ ವಿಚಿತ್ರ

ನಮ್ಮ ಮಧ್ಯಮ ವರ್ಗದವರ ಮನೋಭಾವವೇ ವಿಚಿತ್ರವಾದದ್ದು. ತಮಗಿಂತ ಉತ್ತಮ ಸ್ಥಿತಿಯಲ್ಲಿ ಇದ್ದವರನ್ನು ಕಂಡು ಮನಸ್ಸನ್ನು ಕುಗ್ಗಿಸಿಕೊಂಡು ಕೊರಗುವುದೂ ಅವರ ಸ್ವಭಾವ. ಸಂಸ್ಕೃತಿಯಲ್ಲಿರುವ ನಂಬಿಕೆಗಳನ್ನು ಮಕ್ಕಳ ಮೇಲೆ ಹೇರಿ ಅವರನ್ನು ಗೊಂದಲಕ್ಕೆ ಈಡು ಮಾಡುತ್ತೇವೆ. ಹಣ ಕೊಳ್ಳೆ ಹೊಡೆಯುವ ಕಂಪೆನಿಗಳಲ್ಲಿ ಜೀತ ಮಾಡುವುದನ್ನು ಹೇಳಿಕೊಡುವ ಕೋರ್ಸ್‌ಗಳು ಸಾಕ್ಷರರನ್ನು ಮಾತ್ರ ಸೃಷ್ಟಿಸುತ್ತಿವೆ. ನೆಮ್ಮದಿಯಾಗಿ ಬದುಕಲು ಬೇಕಾದ ಸೃಜನಶೀಲತೆಯನ್ನು ಮೈಗೂಡಿಸದ ಕೆಲಸವು ಬದುಕಿಗೆ ಏನನ್ನು ತಾನೆ ಕೊಡಬಲ್ಲದು? ಅದು ಕೊಡುವ ಕೇವಲ ಹಣ ಮಾತ್ರದಿಂದ ಬದುಕಲು ಅಸಾಧ್ಯ. ಸಮಾಜ ಶಾಸ್ತ್ರ ಮತ್ತು ಮಾನವ ಶಾಸ್ತ್ರದ ಪರಿಚಯವಿಲ್ಲದ ಮಕ್ಕಳು ಭವಿಷ್ಯವನ್ನು ನೆಮ್ಮದಿಯಾಗಿ ಬದುಕಲು ಸಾಧ್ಯವಿಲ್ಲ.

ಹುಟ್ಟಿದಾಗ ಮಾಂಸದ ಮುದ್ದೆಯಂತಿರುವ ಮಗುವಿಗೆ ತಾಯಿ ಕೊಡುವ ಸಂಸ್ಕಾರಗಳು ಅವಳನ್ನು ಒಂದು ಸುಂದರ ಪರಿಪೂರ್ಣ ಮೂರ್ತಿಯಾಗಿ ರೂಪಿಸುವ ನಿಟ್ಟಿನತ್ತ ಪರಿಣಾಮಕಾರಿಯಾಗಿರುತ್ತದೆ. ಆದರೆ ಇಂದಿನ ಮಹಾತಾಯಿ ಟೀವಿ ಧಾರಾವಾಹಿಗಳಲ್ಲಿ ಮುಳುಗಿ ಹೋಗಿದ್ದಾಳೆ. ಇಂದಿನ ಮಗಳೂ ಸಹ ಅಂತಹದೇ ಒಂದು ಕಟು ವಾಸ್ತವದ ಧಾರಾವಾಹಿಯಲ್ಲಿ ಬರುವ ಪಾತ್ರಗಳನ್ನು ತನ್ನೊಳಗೆ ಆವಾಹಿಸಿಕೊಂಡು ಕೂಡುತ್ತಾಳೆ. ಹದಿಹರೆಯದ ಹೆಣ್ಣುಮಕ್ಕಳನ್ನು ಸಹಜವಾಗಿ ಆವರಿಸುವ ಖಿನ್ನತೆಯ ಈ ಹಂತದಲ್ಲಿ ಅಪಾಯಕಾರಿಯಾಗುವ ಬೆಳವಣಿಗೆಯನ್ನು ನಾವು ಕಡೆಗಣಿಸಕೂಡದು.

ಈಗಿನ ಕೆಲ ತಾಯಂದಿರು ಏಕತಾ ಕಪೂರಳ ಅತ್ತೆ– ಸೊಸೆಯರ ಹುಚ್ಚು ಸಂಘರ್ಷದ ಧಾರಾವಾಹಿಗಳಲ್ಲಿ ತೋರಿಸುವ ದ್ವೇಷ, ಅಸೂಯೆ,

ಮಗ ಇದ್ದರಂತೂ ಅವನನ್ನು ಸರ್ವಶ್ರೇಷ್ಠನನ್ನಾಗಿ ಬೆಳೆಸುವ ಮಹತ್ವಾಕಾಂಕ್ಷೆ....

